**ಇಂದು ದಿಃ 13-06-2023 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಂ.ಆರ್.ಎಂ.ಎಚ್ ವಕೀಲರಿಂದಃ**

ನಮ್ಮ ಅಜ್ಜನ ಹೆಸರು ದೊಡ್ಡಗೌಡರ ಬಸವಲಿಂಗಪ್ಪ. ನಮ್ಮ ಅಜ್ಜಿಯ ಹೆಸರು ಗೊತ್ತಿರುವುದಿಲ್ಲ. ನಮ್ಮ ಅಜ್ಜನಿಗೆ 4 ಜನ ಮಕ್ಕಳು ಅವರುಗಳೆಂದರೆ 1.ಮರಿಬಸಪ್ಪ, 2.ಬಸಮ್ಮ, 3.ಬಸಪ್ಪ ಮತ್ತು 4.ಕೊಟ್ರಪ್ಪ. ದೊಡ್ಡಗೌಡರ ಬಸಪ್ಪ ಯಾವಾಗ ಮೃತಪಟ್ಟಿದ್ದಾರೆಂದು ದಾಖಲೆಕೊಟ್ಟಿದ್ದೇನೆ, ಆದೆರೆ ದಿನಾಂಕ ನೆನಪಿರುವುದಿಲ್ಲ. ನಮ್ಮ ತಾಯಿ ಗಂಗಮ್ಮ ನಮ್ಮ ತಂದೆಗಿಂತ ಮೊದಲೇ ಮೃತಪಟ್ಟಿದ್ದಾರೆ. ನಮ್ಮ ಅಜ್ಜ ಬಸವಲಿಂಗಪ್ಪನಿಗೆ 2 ಮನೆ ಮತ್ತು 2 ಜಮೀನುಗಳಿದ್ದವು. ನಮ್ಮ ಚಿಕ್ಕಪ್ಪನಾದ ಕೊಟ್ರಪ್ಪ ಯಾವಾಗ ಮೃತಪಟ್ಟಿದ್ದಾರೆಂದು ನನಗೆ ನೆನಪಿರುವುದಿಲ್ಲ. ಮರಿಬಸಪ್ಪ ನಮ್ಮ ತಂದೆಗಿಂತ ಮೊದಲೇ ಮೃತಪಟ್ಟಿದ್ದಾರೆ. ನಮ್ಮ ಅತ್ತೆ ಬಸಮ್ಮನಿಗೆ ನ್ಯಾಮತಿಗೆ ಕೊಟ್ಟು ಮದುವೆ ಮಾಡಿದ್ದು, ಅವರಿಗೆ ಮಕ್ಕಳಿರುವುದಿಲ್ಲ. ಬಸಮ್ಮ ನಮ್ಮ ತಂದೆಗಿಂತ ಮೊದಲೇ ಮೃತಪಟ್ಟಿದ್ದಾಳೆ. ಮರಿಬಸಪ್ಪ ವ್ಯವಸಾಯ ಮಾಡುತ್ತಿದ್ದರು. ಭಾನುವಳ್ಳಿ ಸಹಕಾರಿ ಸಂಘದ ಕಾರ್ಯದರ್ಶಿ ಯಲ್ಲಪ್ಪ ಎನ್ನುವವರು ಮೊದಲು ಇದ್ದರು. ನಂತರ ಮರಿಬಸಪ್ಪ ಎನ್ನುವವರು ಕಾರ್ಯದರ್ಶಿಯಾಗಿದ್ದರು. ನಮ್ಮ ಚಿಕ್ಕಪ್ಪನಿಗೆ ಸೆಕ್ರರೇಟರಿ ಮರಿಬಸಪ್ಪ ಎಂದು ಆತನು ಸಾಯುವವರೆಗೂ ಕರಿಯುತ್ತಿದ್ದರು. ನಮ್ಮ ಅಜ್ಜನ ಕಾಲದಲ್ಲಿದ್ದ 2 ಜಮೀನುಗಳ ಸರ್ವೆ ನಂಬರ್-71 ಕ್ಷೇತ್ರ 2 ವರೆ ಎಕರೆ, ಸರ್ವೆ ನಂಬರ್-22 ಕ್ಷೇತ್ರ 4 ಎಕರೆ 24 ಗುಂಟಾ ಜಮೀನು ಇತ್ತು. 2 ಜಮೀನುಗಳು ನಮ್ಮ ಅಜ್ಜನ ಕಾಲದಿಂದಲೂ ಇದ್ದವು ಎಂದು ತೋರಿಸಲು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದೇನೆ.

ಬನ್ನೂರು ನಾಗೇಂದ್ರಪ್ಪ ಎನ್ನುವವರ ಬಗ್ಗೆ ನನಗೆ ಗೊತ್ತಿಲ್ಲ. ಬನ್ನೂರು ನಾಗೇಂದ್ರಪ್ಪ ಎನ್ನುವವರಿಗೆ ನಮ್ಮ ಪೂರ್ವಜರು 4 ಎಕರೆ ಚಿಲ್ಲರೆ ಗುಂಟಾ ಜಮೀನನ್ನು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಭಾನುವಳ್ಳಿ ಗ್ರಾಮದಲ್ಲಿರುವ ಬಸವೇಶ್ವರ ದೇವಸ್ಥಾನದ ಹತ್ತಿರ ಒಂದು ಮನೆ ಇತ್ತು. ಗಂಗಮ್ಮನ ದೇವಸ್ಥಾನದ ಎದುರಿಗೆ ಒಂದು ಮನೆ ಇತ್ತು. ಒಂದು ಮನೆಯನ್ನು ಎಲ್ಲರೂ ದುಡಿದು ಖರೀದಿಸಿದ್ದೇವೆ. ಮರಿಬಸಪ್ಪ, ಬಸಮ್ಮ, ಕೊಟ್ರಪ್ಪ, ಬಸಪ್ಪನ ಮಕ್ಕಳು ಬಸವಲಿಂಗಪ್ಪ, ಗದಿಗೆಮ್ಮ, ಬಸವರಾಜಪ್ಪ, ಶಿವಮ್ಮ, ಶಿವಪ್ಪ, ಕುಬೇಂದ್ರಪ್ಪ ಎನ್ನುವವರು ದುಡಿದು, ಭಾನುವಳ್ಳಿ ಗ್ರಾಮದಲ್ಲಿರುವ ಬಸವೇಶ್ವರ ದೇವಸ್ಥಾನದ ಹತ್ತಿರ ಇರುವ ಒಂದು ಮನೆ ಖರೀದಿಸಿದ್ದಾರೆ. ಬಸಮ್ಮನ ಮದುವೆ ಯಾವಾಗ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಬಸಮ್ಮ ಯಾವಾಗ ಮೃತಪಟ್ಟಿದ್ದಾರೆಂದು ದಿನಾಂಕ ನೆನಪಿಲ್ಲ, ನಮ್ಮ ದೊಡ್ಡಪ್ಪ ಮರಿಬಸಪ್ಪನಿಗಿಂತ ಮೊದಲೇ ಮೃತಪಟ್ಟಿದ್ದಾರೆ. ಬಸವೇಶ್ವರ ದೇವಸ್ಥಾನದ ಹತ್ತಿರ ಇರುವ ಮನೆ ಮತ್ತು ಗಂಗಮ್ಮನ ದೇವಸ್ಥಾನದ ಎದುರಿಗೆ ಇರುವ ಮನೆ, ದೊಡ್ಡಗೌಡರ ಚಂದ್ರಶೇಖರ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. 2 ಮನೆಗಳಲ್ಲಿ ಈಗ ದೊಡ್ಡಗೌಡರ ಚಂದ್ರಶೇಖರಪ್ಪನ ಮಕ್ಕಳು ಇದ್ದಾರೆ. ಬಸವೇಶ್ವರ ದೇವಸ್ಥಾನದ ಹತ್ತಿರ ಇರುವ ಮನೆ ಮತ್ತು ಗಂಗಮ್ಮನ ದೇವಸ್ಥಾನದ ಎದುರಿಗೆ ಇರುವ 2 ಮನೆಗಳನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ. ದಾವಾ ಆಸ್ತಿಗಳು ಯಾರ ಯಾರ ಹೆಸರನಲ್ಲಿ ಹೇಗೆ ಬಂದಿವೆ ಎನ್ನುವುದನ್ನು

ತಿಳಿದುಕೊಂಡಿದ್ದೇನೆ. ಸರ್ವೆ ನಂಬರ್-22/2 ಜಮೀನನ್ನು ನಮ್ಮ ಚಿಕ್ಕಪ್ಪ ಮರಿಬಸಪ್ಪನ ಹೆಸರಿಗೆ ಮಾಡುವಂತೆ ನಾವೆಲ್ಲರೂ ಹೇಳಿದ್ದೇವೆ. ಎಷ್ಟು ವರ್ಷಗಳಿಂದ ಆ ರೀತಿ ಹೇಳಿದ್ದೇವೆಂದು ನೆನಪಿಲ್ಲ. ಸರ್ವೆ ನಂಬರ್-22/2 ಕ್ಷೇತ್ರ 1 ಎಕರೆ ಜಮೀನು ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ರೇವಣಸಿದ್ದಪ್ಪ ಎನ್ನುವವರ ಹೆಸರಿನಲ್ಲಿದೆಂದು ಉತ್ತರಿಸುತ್ತಾರೆ. ರೇವಣಸಿದ್ದಪ್ಪನ ಹೆಸರಿಗೆ ಹೇಗೆ ಬಂದಿದೆಂದು ನನಗೆ ಗೊತ್ತಿಲ್ಲ, ನಾನು ಪಹಣಿ ತೆಗಿಸಿದಾಗ ಗೊತ್ತಾಗಿದೆಂದು ಉತ್ತರಿಸುತ್ತಾರೆ. 6 ನೇ ಪ್ರತಿವಾದಿ ಇದ್ದಾರೆ. 6 ನೇ ಪ್ರತಿವಾದಿ ಯಾರ ಮಗನೆಂದು ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿಯ ಸಹೋದರ ಸಹೋದರಿಯರ ಬಗ್ಗೆ ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬರುವುದಕ್ಕಿಂತ ಮೊದಲು ಮಲ್ಲಪ್ಪ ಎನ್ನುವವರು ಹೆಸರಿನಲ್ಲಿ ಖಾತೆ ಇತ್ತು ಎನ್ನುವುದು ಸರಿಯಲ್ಲ. 6 ನೇ ಪ್ರತಿವಾದಿ ಬೆಳ್ಳೂಡಿ ಗ್ರಾಮದವರು ಇರುತ್ತಾರೆ. ಮಲ್ಲಪ್ಪ ಎನ್ನುವವರಿಗೆ ದಾವಾ ಐಟಂ ನಂಬರ್-ಬಿ ಜಮೀನನ್ನು ಮಾರಾಟ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ಮಲ್ಲಪ್ಪನಿಗೆ ಹೆಂಡತಿ, 4 ಜನ ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳಿದ್ದಾರೆ. 6 ನೇ ಪ್ರತಿವಾದಿಯ ಹೆಸರಿಗೆ ಮೋಸದಿಂದ ಖಾತೆಯಾಗಿರುತ್ತದೆ. ಯಾವ ರೀತಿ ಮೋಸದಿಂದ ಖಾತೆ ಆಗಿದೆಂದು ನನಗೆ ಹೇಳಲು ಬರುವುದಿಲ್ಲ. 6 ನೇ ಪ್ರತಿವಾದಿಯ ಹೆಸರಿಗೆ ಮೋಸದಿಂದ ದಾವಾ ಐಟಂ ನಂಬರ್-2 ರ ಖಾತೆಯಾಗಿದೆಂದು ನಾನು ಯಾವುದೇ ಕ್ರಿಮೀನಲ್ ಪ್ರಕರಣ ದಾಖಲಿಸಿರುವುದಿಲ್ಲ. ಈ ನ್ಯಾಯಾಲಯಕ್ಕೆ ದಾವಾ ಸಲ್ಲಿಸಿದ್ದೇನೆ. ದಾವಾ ಬಿ ಶೆಡ್ಯೂಲ್ ಆಸ್ತಿ ಮೋಸದಿಂದ 6 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದ್ದು, ಅದನ್ನು ಒಟ್ಟು ಕುಟುಂಬದ ಆಸ್ತಿಯೆಂದು ಘೋಷಣೆ ಮಾಡುವಂತೆ ನ್ಯಾಯಾಲಯದಲ್ಲಿ ಕೇಳಿರುವುದಿಲ್ಲ, ಊರಿನಲ್ಲಿ ಕೇಳಿರುತ್ತೇನೆ. ಶಿವಮ್ಮ ನನ್ನ 3 ನೇ ಅಕ್ಕ ಇರುತ್ತಾಳೆ. ಶಿವಮ್ಮನನ್ನು ಕಾರಿಗನೂರು ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದಾರೆ. ಆಕೆಯ ಗಂಡ ಕೆ.ಎಸ್.ಆರ್.ಟಿ.ಸಿ ಚಾಲಕನಿರುತ್ತಾನೆ. ಶಿವಮ್ಮ ಗಂಡನ ಮನೆ ಬಿಟ್ಟು ಭಾನುವಳ್ಳಿ ಗ್ರಾಮಕ್ಕೆ ಆಸ್ತಿ ಕೇಳಲು ಬಂದಿದ್ದಳು. 4-5 ವರ್ಷಗಳ ಹಿಂದೆ ಆಸ್ತಿ ಕೇಳಲು ಬಂದಿದ್ದಳು. ನಾಗಮ್ಮ ನನ್ನ ಅಕ್ಕನ ಮಗಳಾಗಬೇಕು. ನಾಗಮ್ಮಳನ್ನು ನನ್ನ ಅಣ್ಣ ಬಸವರಾಜಪ್ಪ ಎನ್ನುವವರಿಗೆ ಕೊಟ್ಟು ಮದುವೆ ಮಾಡಿದ್ದಾರೆ.

ನಮ್ಮ ಅಜ್ಜ ಬಸವಲಿಂಗಪ್ಪನ ಜೀವಿತಾವಧಿಯಲ್ಲಿಯೇ ಮರಿಬಸಪ್ಪ, ಕೊಟ್ರಪ್ಪ ಮತ್ತು ಬಸಪ್ಪ ವಿಭಾಗ ಮಾಡಿಕೊಂಡು ಬೇರೆ ಬೇರೆಯಾಗಿದ್ದರು ಎನ್ನುವುದು ಸರಿಯಲ್ಲ. 3 ಜನ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನನಗೆ ದಾಖಲೆಗಳನ್ನು ಓದಲು ಬರುವುದಿಲ್ಲ. ಆದ್ದರಿಂದ ನ್ಯಾಯಾಲಯದಲ್ಲಿ ತೋರಿಸಲು ಆಗುವುದಿಲ್ಲ. ನಾನು ಪಹಣಿ ಪತ್ರಿಕೆಗಳನ್ನು ಮತ್ತು ಮುಟೇಷನ್ ಗಳನ್ನು ಹೊರತುಪಡಿಸಿ, 3 ಜನ ನಮ್ಮ ತಂದೆಯ ಸಹೋದರರು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಕೋರಿದ್ದಾರೆ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.